ಗೋಚರವಾಗುವುದನ್ನು ಮಾತ್ರ ನಂಬುವ ಪ್ರವೃತ್ತಿ ಅವನದು.

ನಾಳೆಯ ಕಾರ್ಯ ಯೋಜನೆ ಅವನ ಮನಸ್ಸಿನಲ್ಲಿತ್ತು. ಶಾಸಕರ ಭವನಕ್ಕೆ ಭೇಟಿ, ಪುಢಾರಿಯ ಬೇಟೆ, ನಂತರ ಊಟ ಮತ್ತೆ ವಾಪಸ್ಸು ಹೋಟೆಲಿಗೆ ಮರಳುವುದು. ಸಂಜೆ ಸಮಯ ಸಿಕ್ಕರೆ ಜಯನಗರದ ಸ್ನೇಹಿತನ ಮನೆಗೆ ಹೋಗುವುದು.

ದಣಿದಿದ್ದ ರೋಹಿತ್ ಬೇಗನೆ ನಿದ್ರೆಗೆ ಶರಣಾದ. ಮೆಜೆಸ್ಟಿಕ್ಕಿನ ಹೃದಯ ಭಾಗದಲ್ಲೇ ಆ ಹೋಟೆಲಿತ್ತು. ಆಚೆ ರಸ್ತೆಯಲ್ಲಿ ಚಲಿಸುವ ವಾಹನಗಳ ಸದ್ದು ನಡು ರಾತ್ರಿಯಾದರೂ ನಿಂತಿರಲಿಲ್ಲ. ಪ್ರಯಾಣದಿಂದ ದಣಿದಿದ್ದ ರೋಹಿತನಿಗೆ ನಿದ್ರೆ ಮಾಡಲು ಅವು ಯಾವುವೂ ಅಡ್ಡಿ ಎನಿಸಲೇ ಇಲ್ಲ. ಆಚೆ ಯಾರೋ ಜೋರಾಗಿ ಜಗಳವಾಡುತ್ತಿದ್ದ ಶಬ್ದಕ್ಕೆ ಅವನಿಗೆ ಎಚ್ಚರವಾಯಿತು. ಕಣ್ಣು ಬಿಟ್ಟು ಮಲಗಿದ್ದಲ್ಲಿಂದಲೇ ಆಲಿಸಿದ. ಕುಡಿತದ ಅಮಲಿನಲ್ಲಿದ್ದವರಿಬ್ಬರ ಜಗಳ ಕೇಳಿಸಿತು. ಉದಾಸೀನತೆಯಿಂದ ಮತ್ತೆ ಕಣ್ಮುಚ್ಚಿದ. ಏನೋ ಅಸಹಜ ಅನುಭವ! ಆ ರೂಮಿನಲ್ಲಿ ತಾನೊಬ್ಬನೇ ಇಲ್ಲ ಎಂಬ ಭಾವನೆ! ಅಲ್ಲಿ ಇನ್ನೂ ಯಾರೋ ಇದ್ದಾರೆ ಅನಿಸಿತು. ರಾತ್ರಿ ರೂಮ್‌ಬಾಯ್ ಹೇಳಿದ್ದ ದೆವ್ವದ ವಿಷಯ ನೆನಪಾಯಿತು. ಸ್ವಲ್ಪ ಅಧೀರನಾದ. ಮಂಚದ ಪಕ್ಕದಲ್ಲಿದ್ದ ಲೈಟ್ ಸ್ವಿಚ್ಚಿಗೆ ತಡಕಾಡಿದ. ಅಲ್ಲಿ ಹತ್ತಾರು ಸ್ವಿಚ್ಚುಗಳಿದ್ದವು. ಆದರೆ ಯಾವುದೂ ರೂಮಿನ ಲೈಟನ್ನು ಬೆಳಗಿಸಲಿಲ್ಲ. ಫ್ಯಾನು ಆನ್ ಆಯಿತು, ಬಾತ್‌ರೂಮಿನ ಲೈಟು ಹತ್ತಿತ್ತು, ಕಾಲಿಂಗ್ ಬೆಲ್ಲು ರಿಂಗಾಯಿತು. ಆದರೆ ಲೈಟು ಮಾತ್ರ ಹತ್ತಲಿಲ್ಲ. ಭಯವಾಯಿತು! ಆ ನಸುಗತ್ತಲಲ್ಲೇ ಸುತ್ತ ನೋಡಿದ. ಮಂಚಕ್ಕೆ ಎದುರಾಗಿ ಎಡಭಾಗದಲ್ಲೊಂದು ಟೇಬಲ್ಲು ಮತ್ತು ಕುರ್ಚಿಯಿತ್ತು. ಅಲ್ಲಿ ಯಾರೋ ಕುಳಿತಿದ್ದುದು ಬಾತ್‌ರೂಮಿನಿಂದ ಸೋರಿದ ಬೆಳಕಿನಲ್ಲಿ ಅಸ್ಪಷ್ಟವಾಗಿ ಕಂಡಿತು! ಈಗವನು ಪೂರಾ ಹೆದರಿದ! ಮತ್ತೆ ಲೈಟ್ ಸ್ವಿಚ್ಚಿಗೆ ತಡಕಾಡಿದ. ಅಲ್ಲಿದ್ದ ಎಲ್ಲಾ ಸ್ವಿಚ್ಚುಗಳನ್ನೂ ಗಾಬರಿಯಿಂದ ಆನ್ ಮಾಡಿದ. ಒಂದು ಸ್ವಿಚ್ಚು ಕೆಲಸ ಮಾಡಿ ರೂಮಿನಲ್ಲಿ ಬೆಳಕು ಹರಡಿತು. ಚೇರಿನತ್ತ ನೋಡಿದ. ತಾನು ಮೈ ಒರೆಸಿಕೊಂಡ ಟವಲ್ ಕುರ್ಚಿಯ ಮೇಲೆ ಹರಡಿತ್ತು!! ಅರೆ! ಇದೇ... ಈ ಟವೆಲ್ಲಿಗೆ ಎಷ್ಟು ಹೆದರಿದೆ! ಛೇ... ಮನಸ್ಸು ಒಂದು ಕ್ಷಣದಲ್ಲಿ ಎಷ್ಟು ದುರ್ಬಲವಾಯಿತು!! ದೆವ್ವವನ್ನು ಕೆಲವು ಕ್ಷಣ ನಂಬಿಯೇಬಿಟ್ಟೆನೆಲ್ಲ? ನಾಚಿಕೆಯಾಯಿತು. ದೆವ್ವ, ಭೂತಗಳ ಅಸ್ತಿತ್ವದ ಬಗೆಗಿದ್ದ ಅಚಲ ವಿಶ್ವಾಸ ಕೆಲವೇ ಕ್ಷಣಗಳು ಮಾಯವಾಗಿತ್ತು!!

ರೋಹಿತ್ ವಾಚ್ ನೋಡಿಕೊಂಡ ಸಮಯ ಎರಡನ್ನು ಸಮೀಪಿಸಿತ್ತು. ಲೈಟು ಆರಿಸಿ ಮತ್ತೆ ಮಲಗಿದ. ಆದರೆ ನಿದ್ರೆ ದೂರವೇ ಉಳಿಯಿತು. ಕುರ್ಚಿಯ ಮೇಲೆ ನಿಜಕ್ಕೂ ಯಾರೋ ಇದ್ದಂತಿತ್ತಲ್ಲ? ಮತ್ತೆ ಮನಸ್ಸು ವಿಚಲಿತವಾಯಿತು. ಎದ್ದು ಮತ್ತೆ ಚೇರಿನತ್ತ ನೋಡಿದ. ಈಗ ನೋಡಿದ್ದಕ್ಕೂ ಆಗ ಕಾಣಿಸಿದ್ದಕ್ಕೂ ವ್ಯತ್ಯಾಸವಿದೆ ಎನ್ನಿಸಿತು. ಆಗ ತಲೆ ಮತ್ತು ಭುಜ ಕಾಣಿಸುತ್ತಿತ್ತು. ಈಗ ಬರೀ ಟವೆಲ್ಲಿನ ಆಕೃತಿ ಮಾತ್ರ ಕಾಣುತ್ತಿದೆ. ಆಗ ಸ್ಪಷ್ಟವಾಗಿ ತಲೆಯ ಆಕೃತಿ ಟವೆಲ್‌ನಾಚೆ ಇತ್ತು! ಮನಸ್ಸು ಮರ್ಕಟವಾಯಿತು! ನಿಜಕ್ಕೂ ಆಗ ನೋಡಿದ್ದು ದೆವ್ವವೇ? ಹಾಗಿದ್ದರೆ ಅದು ಈಗೇಕೆ ಕಾಣುತ್ತಿಲ್ಲ? ದೆವ್ವವನ್ನು ಕಂಡರೆ ಮನುಷ್ಯರಿಗೆ ಹೆದರಿಕೆಯಿರುವಂತೆ, ಮನುಷ್ಯರನ್ನು ಕಂಡರೆ ದೆವ್ವಗಳಿಗೂ ಹೆದರಿಕೆಯೆ? ತಾನು ಲೈಟ್ ಸ್ವಿಚ್ ಒತ್ತಿದ ತಕ್ಷಣ ಅದು ಅದೃಶ್ಯವಾಯಿತೆ? ತಾನು ಮಲಗಿದರೆ ಅದು ಮತ್ತೆ ಬಂದು ಕುರ್ಚಿಯಲ್ಲಿ ಕೂರಬಹುದೆ? ಅಧೈರ್ಯ ಕಾಡತೊಡಗಿತು. ಒಮ್ಮೆಲೇ ರೂಮ್‌ಬಾಯ್ ಥಾಮಸ್ ನೆನಪಾಯಿತು! ಅವನೇ ಅಲ್ಲವೇ ದೆವ್ವದ ವಿಷಯ ಹೇಳಿದವನು?